




ಹೈದರಾಬಾದ್‌ನಲ್ಲಿ ದುರ್ಗಾದೇವಿಯ ಮ್ಯೂರಲ್ ಕಲಾಕೃತಿಯ ಎದುರು ಮುಖಗವುಸು ಧರಿಸಿರುವ ವ್ಯಕ್ತಿ ಹಾದುಹೋಗುತ್ತಿದ್ದಾನೆ. ನೂರೆಂಟು ನಂಬಿಕೆ–ಕಥೆಗಳ ಹುದುಗಿಸಿಕೊಂಡಂತೆ ಕಾಣಿಸುವ ಈ ಚಿತ್ರಪಟ ಎಎಫ್‌ಪಿಯ ನೋಹ್ ಸೀಲಂ ಅವರದ್ದು.



‘ಕೂಲಿ’ ಚಿತ್ರದಲ್ಲಿನ ಅಮಿತಾಭ್ ಬಚ್ಚನ್ ಅವರ ಪಾತ್ರವನ್ನು ನೆನಪಿಸುವ ಈ ಮ್ಯೂರಲ್ ಕಲಾಕೃತಿ ಮುಂಬಯಿಯಲ್ಲಿದೆ. ಈ ಕಲಾಕೃತಿಯ ಮುಂದೆ ಹಾದುಹೋಗುತ್ತಿರುವ ಮುಸುಕುಧಾರಿಣಿಯನ್ನು ನೋಡಿದರೆ, ಭೂತ–ವರ್ತಮಾನಗಳನ್ನು ಒಟ್ಟಿಗಿಟ್ಟು ಜನಸಾಮಾನ್ಯರ ತವಕತಲ್ಲಣಗಳನ್ನು ಚಿತ್ರಿಸಲು ಛಾಯಾಗ್ರಾಹಕಿ ಪ್ರಯತ್ನಿಸಿದಂತಿದೆ. ಈ ‘ಫೋಟೊ ಕಲಾಕೃತಿ’ ಎಫ್‌ಪಿಯ ಇಂದ್ರಾಣಿ ಮುಖರ್ಜಿ ಅವರದ್ದು.




ಇಂದ್ರಾಣಿ ಮುಖರ್ಜಿ ಕ್ಲಿಕ್ಕಿಸಿರುವ ಈ ಚಿತ್ರದಲ್ಲಿ ಚಲಿಸುತ್ತಿರುವ ರೈಲಿಗೆ ಸಮೀಪದಲ್ಲಿ ಮಾಸ್ಕ್ ಧರಿಸಿರುವ ಯುವಕನೊಬ್ಬ ಹೋಗುತ್ತಿದ್ದಾನೆ. ರೈಲು ಹಾಗೂ ಯುವಕ ತಮ್ಮ ಪಾಡಿಗೆ ತಾವು ಹೋದರೆ ಸರಿ... ದಾರಿಗಳು ಸಂಧಿಸಿದರೆ? ಅಂದಹಾಗೆ, ಚಿತ್ರದಲ್ಲಿರುವುದು ನಿಜವಾದ ರೈಲಲ್ಲ, ಮುಂಬಯಿಯಲ್ಲಿನ ಮ್ಯೂರಲ್ ಕಲಾಕೃತಿ.